ಅದೇ ಮೊಬೈಲಿನಿಂದ ದೊಡ್ಡಕ್ಕನಿಗೆ ಫೋನು ಮಾಡಿದ ರಾಧಾ ಅಳುತ್ತಾ ವಿಷಯ ತಿಳಿಸಿ 'ಗುಲ್ಜಾರ್ ಪಾನ್ ಅಂಗ್ಡಿ ಹತ್ರ ಇದೀನಿ' ಎಂದು ಹೇಳಿ ಫೋನ್ ಕಟ್ ಮಾಡಿದಳು. ಅಷ್ಟರಲ್ಲಿ ಬೀದಿ ದೀಪಗಳು ಹೊತ್ತಿಕೊಂಡವು. ಸಿಗ್ನಲ್ಲಿನ ರಸ್ತೆಗಳ ಮೇಲೆ ಗಾಡಿಗಳ ಹೆಡ್‌ಲೈಟುಗಳ ಬೆಳಕಿನದ್ದೇ ಓಡಾಟ ಶುರುವಾಯಿತು. ತುಂಬಿಕೊಳ್ಳುತ್ತಲೇ ಇದ್ದ ಕಣ್ಣೀರಿನಲ್ಲಿ ಅವುಗಳ ಬೆಳಕು ಮಬ್ಬು ಮಬ್ಬಾಗಿತ್ತು. ಹತ್ತೇ ನಿಮಿಷದಲ್ಲಿ ಆಟೋದಲ್ಲಿ ನಾಲ್ವರೊಂದಿಗೆ ಬಂದ ದೊಡ್ಡಕ್ಕ ರಾಧಾಳನ್ನು ಸಮಾಧಾನ ಮಾಡಿ ವಿಷಯವನ್ನು ಇನ್ನೂ ವಿವರವಾಗಿ ತಿಳಿದುಕೊಂಡು ಜೊತೆಗಾರ್ತಿಯರನ್ನು ಬೇರೆ ಬೇರೆ ಕಡೆಗೆ ಕಳಿಸಿ ರಾಧಾಳೊಂದಿಗೆ ತಾನೊಂದು ರಸ್ತೆಗೆ ಹೋದಳು.

ಹೊತ್ತು ರಾತ್ರಿ ಹತ್ತಾಯಿತು. ಎಷ್ಟೋ ಫೋನು ಕರೆಗಳು ವಿನಿಮಯವಾದವು. ಯಾವ ಕಡೆಯಿಂದಲೂ ಸುಕನ್ಯಾಳ ಸುದ್ದಿ ಇಲ್ಲ. ಎಲ್ಲಾ ವಿಚಾರಣೆಗಳು ಸುತ್ತಲಿನವರು ಹನ್ನೆರಡರ ಹೊತ್ತಿಗೆ ಅವಳನ್ನು ನೋಡಿದ್ದರು ಮತ್ತು ಆ ಹೊತ್ತಿಗೆ ರಾಧಾ ಸಿಗ್ನಲ್ಲಿನಲ್ಲಿ ಇರಲಿಲ್ಲ ಎಂಬಲ್ಲಿಗೆ ಬಂದು ಅಂತ್ಯವಾಗುತ್ತಿದ್ದವು. ನಾಳೆ ಒಂದು ದಿನ ನೋಡಿ ಕಂಪ್ಲೇಟು ಕೊಡೋಣ ಎಂಬ ನಿರ್ಧಾರಮಾಡಿದ ದೊಡ್ಡಕ್ಕ ನಿಧಾನವಾಗಿ ಅಲ್ಲಿಂದ ರಾಧಾಳನ್ನು ಕರೆದುಕೊಂಡು ಹೋದಳು.

## 10

ಕಾಣೆಯಾದ ಮೂರನೇ ದಿನಕ್ಕೆ ಸ್ಟೇಶನ್ನಿಗೆ ಹೋದಾಗ ಅಲ್ಲಿನ ರೈಟರ್, 'ಇಲ್ಲೇ ಎಲ್ಲಾನ ಹೋಗಿರ್ಬೇಕು. ಇನ್ನೊಂದ್ ಎರ್ಡ್ ದಿನ ಕಾಯ್ರಿ' ಎಂದು ಹೇಳಿದ್ದು ನಿಮ್ಮ ಕೆಲಸ ಮಾಡಲು ತಮಗೆ ಆಸಕ್ತಿಯಿಲ್ಲ ಎನ್ನುವುದನ್ನು ಸ್ಪಷ್ಟವಾಗಿ ಹೇಳುತ್ತಿತ್ತು.

ಇಷ್ಟರಲ್ಲಿ ರಾಧಾ ಗಮನಿಸಿದ ಮತ್ತೊಂದು ವಿಷಯವೆಂದರೆ ಘಟನೆ ನಡೆದ ಮರುದಿನದಿಂದ ಸಿಗ್ನಲ್ಲಿನಲ್ಲಿ ಆ ಬಿಳಿ ಕಾರೂ ಕಾಣಿಸಿಕೊಂಡಿಲ್ಲವೆಂಬುದು. ರಾಧಾಳಿಗೆ ಅನುಮಾನ ಬಲವಾಗಿ ತಲೆ ಕೆಡಲತ್ತಿದಾಗ ತನ್ನ ಸಿಗ್ನಲ್ಲಿನಿಂದಲೇ ದೊಡ್ಡಕ್ಕನಿಗೆ ಫೋನು ಮಾಡಿದಳು. 'ಅಲ್ಲವಾ ಇವಾಗ ಹೇಳಾಕತ್ತೀಯಲ್ಲ. ಏನಾನಾ ಆಗಿದ್ರೆ ಏನ್ ಕತೀ?' ಎಂದು ಚಡಪಡಿಸಿದ ದೊಡ್ಡಕ್ಕ ತುರ್ತಾಗಿ ಎಲ್ಲರನ್ನೂ ಮನೆಗೆ ಕರೆಸಿಕೊಂಡು ದೊಡ್ಡ ಧ್ವನಿಯಲ್ಲಿ 'ನೋಡ್ರೇ ಈ ಪೇಪರ್‍ನ್ಯಾಗ ಬರ್ದಾತಲ್ಲಾ, ಈ ನಂಬರ್ ನೋಡ್ಕೆಳ್ರಿ. ಈ ನಂಬರ್ರಿನ್ ಬಿಳಿ ಕಾರುನ್ನ ಜಲ್ದಿ ಹುಡುಕ್ಬೇಕು' ಎನ್ನುತ್ತಿರುವಾಗಲೇ ರಾಧಾ ಬಿಕ್ಕಳಿಸಲತ್ತಿದಳು. 'ವಾರ್ದಾಗ ಎರ್ಡ್ ಮೂರ್ ಸಲೆ ನಮ್ಮ್ ಸಿಗ್ನಲ್ಲಿನ್ಯಾಗ ಐನೂರು ಕೊಡ್ತಿದ್ದ. ಒಳ್ಳೇತ ಅನ್ಕಂಡಿದ್ದೆ ಹಲ್ಕಾ ಸೂಳ್ಯಾಮಗ' ಎಂದು ಬೈದಳು. ಅಷ್ಟರಲ್ಲಾಗಲೇ ದೊಡ್ಡ ಬಿಳಿ ಹಾಳೆಯೊಂದರಲ್ಲಿ ದೊಡ್ಡದಾಗಿ ಬರೆದಿದ್ದ ಕಾರಿನ ನಂಬರ್ ಅಲ್ಲಿದ್ದವರಿಗೆಲ್ಲಾ ಕಂಠಪಾಠವಾಗಿತ್ತು. ಜೊತೆಗೆ ಮೊನ್ನೆ ರಾಧಾ ಮತ್ತು ಸುಕನ್ಯಾ ನೋಡಿದ ಸಿನಿಮಾದ ಕತೆಯೂ ಗೊತ್ತಾಯಿತು. ಸಿನಿಮಾದ ಕೋಪದಲ್ಲಿ ಎಲ್ಲರೂ ಮರಳಿ ತಮ್ಮ ತಮ್ಮ ಸಿಗ್ನಲ್ಲುಗಳ ದಾರಿ ಹಿಡಿದರು.

ರಾಧಾ ದಿನವೂ ಸಿಗ್ನಲ್ಲಿಗೆ ಬಂದು ಕಾರಿಗಾಗಿ ಕಾಯಲತ್ತಿದಳು. ಹತ್ತು ದಿನಗಳಾದವು ಎಲ್ಲರ ಪ್ರಯತ್ನಗಳು ವಿಫಲವಾದವು. ಸುಮ್ಮನೆ ವಾಹನಗಳನ್ನು ನೋಡುತ್ತಾ ಕೂತಿರುತ್ತಿದ್ದ ರಾಧಾ ಹೊಟ್ಟೆ ಚುರುಗುಟ್ಟಿದರೆ ಮಾತ್ರ ಬಿದ್ದ ಸಿಗ್ನಲ್ಲಿನಲ್ಲಿ ಎರಡು ಬಾರಿ ಓಡಾಡಿ ಊಟಕ್ಕೆ ಸಾಕಾಗುವಷ್ಟು ಹೊಂದಿಸಿಕೊಳ್ಳುತ್ತಿದ್ದಳು. ಇನ್ನೊಂದು ದಿನ ಸಣ್ಣ ಚೀಟಿಯಲ್ಲಿ ಕಾರಿನ ನಂಬರ್ ಬರೆದು 'ಈ ಕಾರು ಯಾರ್ದು ಅಂತ ಗೊತ್ತಾಗ್ಬೇಕು, ತಗಳ್ರಿ' ಎಂದು ಟ್ರಾಫಿಕ್ ಪೊಲೀಸೊಬ್ಬನಿಗೆ ಐನೂರು ರುಪಾಯಿ ಕೊಟ್ಟಳು. ಕಾಸು ಕಂಡವನು 'ಆಯ್ತಾಯ್ತು' ಎಂದು ಇಸಿದುಕೊಂಡು ನಂತರ ಸುಮ್ಮನಾಗಿದ್ದ.